ಸದರೀ ದರಖಾಸ್ತುದಾರರಾದ ದಾಸಪ್ಪನವರ ಅರ್ಜಿಯನ್ನು 1890ನೇ ಇಸವಿ ಮೇ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಂತಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಅರ್ಜಿ ನಂಬರ್ 129.

ಮೃತಪಟ್ಟ ಶ್ರೀಕಂಠಸುಬ್ಬಾಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ನಂಜುಂಡಭಟ್ಟರು, ಮೃತಪಟ್ಟ ಸದರೀ ಶ್ರೀಕಂಠಸುಬ್ಬಾಭಟ್ಟರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಶಿವರಾಂ ಪ್ಯಾಟೆ ಸ್ಥಳದ ಸದರೀ ನಂಜುಂಡಭಟ್ಟರು ಸದರೀ ವಾಸಸ್ಥರಾಗಿ ಮೃತಪಟ್ಟ ಶ್ರೀಕಂಠಸುಬ್ಬಾಭಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 78 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜುಂಡಭಟ್ಟರ ಅರ್ಜಿಯನ್ನು 1890ನೇ ಇಸವಿ ಮೇ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀಕಂಠಸುಬ್ಬಾಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಏಪ್ರೆಲ್ ತಿಂಗಳು 2ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿನಿ ಕೊಡಲ್ಪಟ್ಟತು.

1890ನೇ ಇಸವಿ ಅರ್ಜಿ ನಂಬರ್ 138.

ಮೃತಪಟ್ಟ ಟಿ. ಸುಬ್ಬರಾಯರ ಆಸ್ತೀವಿಷಯದಲ್ಲಿ—

ಅರ್ಜಿದಾರ್ರು ಟಿ. ಲಕ್ಷ್ಮಣರಾಯರು, ಮೃತಪಟ್ಟ ಸದರೀ ಸುಬ್ಬರಾಯರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ಸದರೀ ಲಕ್ಷ್ಮಣರಾಯರು ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯರ ಜಿಂದಗಿ ಬಗ್ಯಾಗಿ ಬರತಕ್ಕ 1600 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ [redacted] ದಾರರಾದ ಲಕ್ಷ್ಮಣ[redacted]ರ ಅರ್ಜಿಯನ್ನು 1890ನೇ ಇಸವಿ ಜೂ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಏಪ್ರೆಲ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ.

ಪ್ರಕಟನೆ.

ತಾರೀಖು 30ನೇ ಏಪ್ರೆಲ್ 1890.

ಈ ಕೆಳಗೆ ನಮೂದಾಗುವ ಆನೆಗಳು ಮತ್ತು ಹರಾಜ್ ತಾರೀಖು ವರಿಗೆ ಹಿಡಿಯಲ್ಪಡುವ ಆನೆಗಳು ಸಹ 1890ನೇ ಇಸವಿ ಜೂ ತಾರೀಖು 16ರಲ್ಲು ಮೈಸೂರಿನಿಂದ 20 ಮೈಲಿ ಫಾಸಲೆಯಲ್ಲಿ ಯಿರುವ ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಮೊಕ್ಕಾಂನಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕಲೆಕ್ಟರವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಹೆಸರು.	ಜಾತಿ.	ಯತ್ತರ ಅಡಿ	ಅಂಗುಲ.	ಹಿಡಿದ ತಾರೀಖು.	ಷರಾ.
1	ನರಸುಹ್ಮ ..	ಗಂಡು	6	6	21—2—90	
2	ಚಂದ್ರಶೇಖರ ..	ಡಿಟೋ	4	9	14—3—90	
3	ವರಲಕ್ಷ್ಮಿ ..	ಹೆಣ್ಣು	6	0	ಡಿಟೋ	
4	ಗಜಲಕ್ಷ್ಮಿ ..	ಡಿಟೋ	7	6	ಡಿಟೋ	

ಷರತ್ತುಗಳು—ಸರ್ಕಾರದ ಹರಾಜ್ ಖೈದಾದ ಕೂಡ್ಲೆ ಚಡ ದರಖಾಸ್ತುದಾರನು ಹರಾಜು ಮೊಬಲಗಿನ ಮೇಲೆ ಕೇಕಡಾ 25 ರೂ ಪಾಯಿ ಶೇವಣಿಯನ್ನು ಪಾವತಿ ಮಾಡತಕ್ಕದ್ದು, ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಡಾಗಿ ಪಾವತಿ ಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಶೇವಣಿ ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳಲಾಗುತ್ತೆ, ಮತ್ತು ಸದರೀ ಆನೆಗಳು ಪುನಹ ಹರಾಜು ಮಾಡುವದರಲ್ಲಿ ಯುಂಟಾಗಬಹುದಾದ ನುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ, ನಫೆ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲ. ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾಜ್ ತಾರೀಖು ಲಾಗಾಯತು ತಗಲುವ ಖರ್ಚು ವಹಿಸಬೇಕು.

ಬಿ. ರಾಮಸ್ವಾಮಯ್ಯಂಗಾರ್,
ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮಿಸರೇಟರ್.

ಪ್ರಸಿದ್ಧ ಪತ್ರಿಕೆ.

ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಮಹಾಸ್ವಾಮಿಯವರ ಆಜ್ಞಾನುಸಾರ, ಆಳಿದ ಮಹಾಸ್ವಾಮಿಯವರಾದ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರಿಂದ ಕರ್ನಾಟಕ ಭಾಷೆಯಲ್ಲಿ ವಾಕ್ಯರೂಪವಾಗಿ ವಿರಚಿತವಾದ, ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಶ್ರೀಮನ್ಮಹಾಭಾರತದ ಕನ್ನಡದ ಟೀಕನ್ನು ಲೋಕೋಪಕಾರಾರ್ಥವಾಗಿರುವಂತೆ, 1884–85ನೇ ಇಸವಿಯಲ್ಲಿ ಮೈಸೂರು ಅರಮನೆಯ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ವಿರಾಟಪರ್ವವನ್ನೂ ಉದ್ಯೋಗಪರ್ವವನ್ನೂ ಮುದ್ರಿಸಿ ಪ್ರಚಾರಪಡಿಸಿರುವ ವಿಷಯವು ಸರ್ವರಿಗೂ ವಿದಿತವಾಗಿರುವದಷ್ಟೆ.

ಶ್ರೀಮನ್ಮಹಾರಾಜರವರ ಆಜ್ಞೆಯಂ ಪಡೆದು ಉಳಿದಿದ್ದ ಹದಿನಾರು ಪರ್ವಗಳಲ್ಲಿ ಆದಿಪರ್ವವೂ ಸಭಾಪರ್ವವೂ ಬೆಂಗಳೂರಲ್ಲಿರುವ ಚಾಮುಂಡೇಶ್ವರಿ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟು ಈಗ ಕ್ರಯಕ್ಕೆ ಸಿದ್ಧವಾಗಿರುತ್ತದೆ.

ಈಗ ನಮ್ಮಲ್ಲಿ ಕರ್ಣಪರ್ವವು ಮುದ್ರಿಸಲ್ಪಟ್ಟು ಕ್ರಯಕ್ಕೆ ಸಿದ್ಧವಾಗಿರುತ್ತದೆ. ಇದರ ಕ್ರಯವು ಪ್ರತಿ ಬಂದಕ್ಕೆ ರೂಪಾಯಿ 1—12—0, ಟಪಾಲ್ ಹಾಸಲ್ ಸಹಿತ ರೂಪಾಯಿ 2—0—0, ಜೇಕಾದವರು ಈ ಕೆಳಗೆ ರುಜು ಮಾಡಿರುವವರಿಗೆ ಕ್ರಯವನ್ನು ಕಳುಹಿಸಿ ಬರೆದರೆ ಪುಸ್ತಕವು ದೊರಿಯುತ್ತದೆ. ಈಗ ಅರಣ್ಯಪರ್ವವು ಮುದ್ರಣೆಯಲ್ಲಿರುತ್ತದೆ.

ಮೈಸೂರು,
16ನೇ ಏಪ್ರಿಲ್ 1890.

ಬಿ. ಚಿ. ರಾಜಪ್ಪ,
ಮೈಸೂರಲ್ಲಿರುವ ಸರಕಾರದ ಬ್ರಾಂಚ್ ಮುದ್ರಾಶಾಲೆಯ ಫೋರ್‌ಮ್ಯಾನ್.

ಈ ಕೆಳಗೆ ರುಜು ಮಾಡುವ ಕೇಶವಯ್ಯನಾದ ನಾನು–ಮೈಸೂರು ಸಾಹುಕಾರ ಚಿಕ್ಕ ಮಲ್ಲಯ್ಯನವರ ಬಾಬತು ಚಿಕ್ಕ ಅಂಗಡಿಗೆ ಸಂಬಂಧಪಟ್ಟ ಬೆಂಗಳೂರು ತರಗುಮಂಡಿಯಲ್ಲಿ ಸದರೀ ಚಿಕ್ಕ ಮಲ್ಲಯ್ಯನವರ ಪಾಲ್‌ದಾರನಾಗಿ ಭೂಸಾ ವ್ಯಾಪಾರವನ್ನು ಮಾಡುತ್ತಾ ಯಿದ್ದು ಈಚಿಗೆ ಸದರೀ ಪಾಲು ವ್ಯಾಪಾರ ಮತ್ತು ಅದಕ್ಕೆ ಸಂಬಂಧಪಟ್ಟ ವಿಸಿಪ್ಪ್ಯ ಲೇಣಿ ದೇಣಿಯನ್ನೂ ಸಹ ಸದರೀ ಚಿಕ್ಕ ಮಲ್ಲಯ್ಯನವರಿಗೆ ಹರಾಜು ಮೂಲಕ ವಹಿಸಿಕೊಟ್ಟು ಪಾಲು ವ್ಯಾಪಾರಕ್ಕೆ ಸಂಬಂಧಪಟ್ಟ ವಿಸಿಪ್ಪ್ಯ ಲೆಕ್ಕ ಪತ್ರಗಳನ್ನೂ ಸದರೀಯವರ ಸುಪರ್ದು ಮಾಡಿ ಯಿರುತ್ತೆಯಾಗಿ ಯಿಲ್ಲಿಂದ ಮುಂದೆ ಸದರೀ ಪಾಲು ವ್ಯಾಪಾರಕ್ಕೆ ಬರಬೇಕಾದ ಲೇಣಿ ಮತ್ತು ಕೊಡಬೇಕಾದ ದೇಣಿಗೆ ಸಹ ಸದರೀ ಚಿಕ್ಕ ಮಲ್ಲಯ್ಯನವರೇ ಹಕ್ಕುದಾರ್‌ರಾಗಿ ಯಿರುತ್ತಾರೆಯೇ ಹೊರ್ತು ಸದರೀ ಪಾಲು ವ್ಯಾಪಾರದಲ್ಲಿ ನನಿಗೆ ಯಾವ ಹಕ್ಕೂ ಇರುವದಿಲ್ಲವೆಂದು ಇದರಿಂದ ಪ್ರಸಿದ್ಧಪಡಿಸಿ ಯಿರುತ್ತೆ.

ತಾರೀಖು ನೇ ಮೇ ಸ್ರ 1890ನೇ ಇಸವಿ ಮೈಸೂರು.

ರುಜು ಕೇಶವಯ್ಯ.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥ ವಾಗಿ ಗವರ್ಮೆಂಟ್. ಆಫಿಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟೂನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟೂನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಬಂದು ಪೌಂವುಳ್ಳ ಡಬ್ಬಿಗೆ 17 ರೂ. 8 ಆಣೆ, ಈ ಔಷಧವು ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ, ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Govt. Central Press, Bangalore—1890.